# ಜೀವಂತವಿರುವುದು

ಕಲಾವಿದ ಚಿತ್ರ ಬಿಡಿಸುವುದು
ಯುವತಿ ನವಿಲಿಗೆ ಕಾಳು ಹಾಕುವುದು
ತಾಯಿ ಮಗುವಿಗೆ ಆಟವಾಡಿಸುವುದು
ಜನರು ಕಲಾಕೃತಿಗಳ ನಿಂತು ನೋಡುವುದು
ಹುಡುಗಿಯೊಬ್ಬಳು ಐಸ್‌ಕ್ರೀಂ ತಿನ್ನುವುದು
ಯಾರೋ ಫೋಟೊ ತೆಗೆದಿರುವುದು
ನಾನೊಂದು ಕವಿತೆ ಬರೆಯುವುದು...

ಈ 'ದು' ಎಂಬುದು ಏನದು?
ಏನಿದರ ಹಕೀಕತ್ತು?
'ದು' ಯಾವುದಕ್ಕೆ ಯಾವುದು?
ಇವುಗಳಿಂದಲೇ ಜಗತ್ತು ಎಂದಿಗೂ
ಜೀವಂತವಾಗಿ ಜಗತ್ತಿಗೇ ತೋರುವುದು

● **ಕೊಟ್ರೇಶ ಅಕ್ಕಿ**

# ಮೂಗು ಮುರಿಯದಿರಿ

ಸುಂದರಿಯೊಬ್ಬಳು ಕಾಳನು ತಿನಿಸುವ
ಸುಂದರ ನವಿಲಿನ ಚಿತ್ರ
ಗೊಂಬೆಯ ಮಾರುತ ಕುಳಿತಿಹ
ಹೆಣ್ಣಿನ ಚಂದದ ನಲಿವಿನ ಚಿತ್ರ
ಚಿತ್ರದ ಮುಂದೆ ನಿಂತಿಹ ಜನಗಳ
ವಿಧ ವಿಧ ಭಾವದ ಚಿತ್ರ
ಎಲ್ಲರ ಮಧ್ಯೆ ಬಿಂದಾಸ್ ಆಗಿ
ಐಸ್‌ಕ್ರೀಂ ತಿನ್ನುವ ನಾನು! ಏನೀ ವಿಚಿತ್ರ

ನಗುವಿರ ನೀವು ನನ್ನನು ನೋಡಿ
ರಸಿಕತೆ ಇಲ್ಲ ಎನಬೇಡಿ
ನಿಂತಿಹೆ ನಾನೀಗ ಎಲ್ಲವ ನೋಡಿ
ಕಣ್ಮನ ಸೆಳೆದಿವೆ ಮಾಡುತ ಮೋಡಿ
ಹೃದಯವು ಕುಣಿದಿದೆ ನಲಿದಾಡಿ

ಹೊಟ್ಟೆ ಹಸಿದಿದೆ ಕಾಡಿ
ಕಾಲ್ಗಳು ದಣಿದಿವೆ ಬಲು ಓಡಾಡಿ
ಐಸ್‌ಕ್ರೀಂ ತಿಂದರೆ ಈ ಖೋಡಿ
ದಮ್ಮಯ್ಯ ಮೂಗನು ಮುರಿಬೇಡಿ.

● **ಎಂ. ಗೀತಾ**

